ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 04-03-2026:

ಮುಂದುವರೆದ ಮುಖ್ಯ ವಿಚಾರಣೆ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದ

ನೋಂದಣಿ ಮತ್ತು ಮುದ್ರಾಂಕ ಶುಲ್ಕ 28,410ರೂಗಳನ್ನು ಆರೋಪಿತರ ಖರ್ಚಿಗೆ ತೆಗೆದುಕೊಂಡಿರುತ್ತೇನೆ. ಈ ಬಗ್ಗೆ ಸಂಬಂಧಿಸಿದ ದಾಖಲೆ ನಿಪಿ-162 ಆಗಿರುತ್ತದೆ.

ನಂತರ ಆರೋಪಿತರ ಪತ್ನಿ ಶುಭಾರವರು ಕುವೆಂಪುನಗರ ಬಡಾವಣೆಯಲ್ಲಿ ಇರುವ ಸೈಟನ್ನು ನೋಂದಣಿ ಮಾಡಲು ಪಾವತಿಸಿದ ನೋಂದಣಿ ಮತ್ತು ಮುದ್ರಾಂಕ ಶುಲ್ಕ 48,550 ಎಂದು ಉಪನೋಂದಣಾಧಿಕಾರಿಗಳು ನೀಡಿ ಮಾಹಿತಿಯಲ್ಲಿ ಕಂಡುಬಂದಿರುತ್ತದೆ. ಇದನ್ನು ಆರೋಪಿತರ ಖರ್ಚಿಗೆ ತೆಗೆದುಕೊಂಡಿರುತ್ತೇನೆ. ಈ ಬಗ್ಗೆ ದಾಖಲೆ ನಿಪಿ-18 ಅಗಿರುತ್ತದೆ.

ಸದರಿ ಶುಭಾರವರು ಸಹನಾ ವಿವಿದೋದ್ದೇಶ ಸಹಕಾರ ಸಂಘಗಳಲ್ಲಿ ಖರೀದಿಸಿದ ಛಾಪಾಕಾಗದದ ಬೆಲೆ 1395ನ್ನು ಆರೋಪಿತರ ಖರ್ಚಿಗೆ ತೆಗೆದುಕೊಂಡಿರುತ್ತೇನೆ. ಈ ಬಗ್ಗೆ ದಾಖಲೆ ನಿಪಿ-94 ಆಗಿರುತ್ತದೆ.

ಆರೋಪಿತರು ಮತ್ತು ಅವರ ಪತ್ನಿ ಹೆಸರಿನಲ್ಲಿರುವ ಕಟ್ಟಡಗಳ ಮನೆಗಂದಾಯದ ಮಾಹಿತಿಯನ್ನು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಪುರಸಭೆಯವರಿಂದ ಪಡೆದಿರುತ್ತೇನೆ. ಪುರಸಭೆಯವರಿಂದ ನಿಪಿ-47ರಂತೆ ಬಂದ ಮಾಹಿತಿಯಲ್ಲಿ ಆರೋಪಿತರ ಹೆಂಡತಿಯ ಹೆಸರಿನಲ್ಲಿರುವ ಆಸ್ತಿಗೆ ಕಟ್ಟಡದ ಪರವಾನಿಗೆಗಾಗಿ ರೂ 33273ರೂಪಾಯಿ ಮತ್ತು ಆಸ್ತಿ ಹಕ್ಕು ಬದಲಾವಣೆಗಾಗಿ 325 ರೂಪಾಯಿ ಹಾಗೂ ಆರೋಪಿತರ ಹೆಸರಿನ ನೀರಿನ ಕಂದಾಯ 3375ರೂಪಾಯಿ ಪಾವತಿಸಿರುವುದಾಗಿ ತಿಳಿಸಿರುತ್ತಾರೆ. ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಂದ ನಿಪಿ-48ರ ಮಾಹಿತಿಯಲ್ಲಿ ಕಟ್ಟಡ ಪರವಾನಿಗೆ ಬಾಬ್ತು 1480ರೂಪಾಯಿ ಪಾವತಿಸಿರುತ್ತಾರೆಂದು ತಿಳಿಸಿರುತ್ತಾರೆ. ಈ ಎಲ್ಲಾ ಹಣವನ್ನು ಆರೋಪಿತರ ಖರ್ಚಿಗೆ ತೆಗೆದುಕೊಂಡಿರುತ್ತೇನೆ.

ಆರೋಪಿತರ ಮತ್ತು ಅವರ ಹೆಂಡತಿ ಹೆಸರಿನಲ್ಲಿರುವ ಕಟ್ಟಡಗಳ ವಿದ್ಯುತ್ ಸ್ಥಾವರಗಳಿಗೆ ಸಂಬಂಧಿಸಿದ ಬಿಲ್ ಮತ್ತು ಇತರ ಪಾವತಿಸಿರುವ ಬಗ್ಗೆ ಮಾಹಿತಿ ಪಡೆದಿದ್ದು ಅವರು ನಿಪಿ-30ರ ಪತ್ರದೊಂದಿಗೆ ನಿಪಿ-31ರಂತೆ ಮಾಹಿತಿ ನೀಡಿರುತ್ತಾರೆ. ಅದರಲ್ಲಿ ಕಂಡುಬಂದ ಹಣವನ್ನು ಆರೋಪಿತರ ಖರ್ಚಿಗೆ ತೆಗೆದುಕೊಂಡಿರುತ್ತೇನೆ.

ಆರೋಪಿತರ ಮನೆಯ ದೂರವಾಣಿ ಸಂಖ್ಯೆ 231437ರ ಠೇವಣಿ ಹಣ ಮತ್ತು ತಿಂಗಳ ಬಿಲ್ ಬಗ್ಗೆ ಮಾಹಿತಿ ನೀಡುವಂತೆ ಬಿ ಎಸ್ ಎನ್ ಎಲ್ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದ್ದು ಅದರಂತೆ ಸದರಿಯವರು 30-10-13 ರಂದು ನೀಡಿದ ಮಾಹಿತಿಯನ್ನು ಪರಿಶೀಲಿಸಿದಾಗ 10670ರೂ ಠೇವಣಿ ಹಣ ನೀಡಿರುವುದಾಗಿ ಕಂಡುಬಂತು. ಅದನ್ನು ಆರೋಪಿತರ ಖರ್ಚಿಗೆ ತೆಗೆದುಕೊಂಡಿರುತ್ತೇನೆ. ಈ ಬಗ್ಗೆ ದಾಖಲೆ ನಿಪಿ-163 ಆಗಿರುತ್ತದೆ.

ಆರೋಪಿತರು ಮತ್ತು ಅವರ ಹೆಂಡತಿ ಹೆಸರಿನಲ್ಲಿರುವ ಅಡುಗೆ ಅನಿಲ ಮಾಹಿತಿ ನೀಡುವಂತೆ ಭಾರತ್ ಗ್ಯಾಸ್ ವ್ಯವಸ್ಥಾಪಕರಿಗೆ ಪತ್ರ ಬರೆದಿದ್ದು ಸದರಿಯವರು ದಿನಾಂಕ 17-12-23ರಂದು ನಿಪಿ-32 ರ ಪತ್ರದೊಂದಿಗೆ ನೀಡಿದ ಮಾಹಿತಿಯನ್ನು ಸ್ವೀಕರಿಸಿರುತ್ತೇನೆ. ಅದನ್ನು ಪರಿಶೀಲಿಸಿದಾಗ ಆರೋಪಿತರ ಹೆಂಡತಿಯ ಹೆಸರಿನಲ್ಲಿ ಅಡುಗೆ ಅನಿಲ ಸಂಪರ್ಕ ಮತ್ತು ಠೇವಣಿಗಾಗಿ 23075ರೂಪಾಯಿ ಪಾವತಿಯಾಗಿದೆ ಎನ್ನುವುದು ಕಂಡುಬಂತು. ಇದನ್ನು ಆರೋಪಿತರ ಖರ್ಚಿಗೆ ತೆಗೆದುಕೊಂಡಿರುತ್ತೇನೆ.

ಆರೋಪಿತರ ವಾಹನ ನಿರ್ವಹಣಾ ವೆಚ್ಚದ ಬಗ್ಗೆ National insurance company ಗೆ ಪತ್ರ ಬರೆದಿರುತ್ತೇನೆ. 4-12-13 ರಂದು ಆರೋಪಿತರ ಪತಿ ಹೆಸರಿನಲ್ಲಿರುವ ಕೆಎ-13-ಎಸ್-0029ರ ವಾಹನದ ಇನ್ಸುರೆನ್ಸ್ ಪಾವತಿ ಹಣ ಒಟ್ಟು 3163 ಎಂದು ಸದರಿ ವಿಮಾ ಕಂಪೆನಿಯವರು ತಿಳಿಸಿದ ಮಾಹಿತಿಯಲ್ಲಿ ಕಂಡುಬಂದಿರುತ್ತದೆ. ಸದರಿ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-164** ಎಂದು ಗುರುತಿಸಲಾಯಿತು. ಇದನ್ನು ಆರೋಪಿತರ ಖರ್ಚಿಗೆ ತೆಗೆದುಕೊಂಡಿರುತ್ತೇನೆ.

ಆರೋಪಿತರ ಪತ್ನಿ ಹೆಸರಿನಲ್ಲಿರುವ ಕೆಎ-13-ಎಸ್-0029ರ ವಾಹನಕ್ಕೆ ಬಿಡಿಭಾಗಗಳ ಖರೀದಿ, ಮತ್ತು ಅದರ ಒಟ್ಟು ಇಂಧನ ಹಾಗೂ ನಿರ್ವಹಣಾ ವೆಚ್ಚದ ಬಗ್ಗೆ ಮಾಹಿತಿಯನ್ನು ಪಡೆದಿದ್ದು ಸದರಿಯವರು ನೀಡಿದ ನಿಪಿ-67ರ ಮಾಹಿತಿಯಂತೆ ಒಟ್ಟು ವೆಚ್ಚ 41,600ರೂಪಾಯಿ ಆಗಿರುತ್ತದೆ. ಆರೋಪಿತರ ಹೆಸರಿಲ್ಲಿರುವ ವಾಹನ ಕೆಎ-13-ಜಿ-8534ರ ಇಂಧನ ಮತ್ತು ನಿರ್ವಹಣಾ ವೆಚ್ಚದ ಮಾಹಿತಿ ಪಡೆದಿದ್ದು ನಿಪಿ-66ರ ಮಾಹಿತಿಯಂತೆ ಒಟ್ಟು ವೆಚ್ಚ 80540ರೂಪಾಯಿ ಆಗಿರುತ್ತದೆ. ಆರೋಪಿತರ ಹೆಸರಿನಲ್ಲಿರುವ ಈ ವಾಹನದ ವಿಮಾ ಪಾಲಿಸಿ ಮಾಹಿತಿಯನ್ನು ನಿಪಿ-70ರ ಪತ್ರದೊಂದಿಗೆ ನಿಪಿ-71ರಂತೆ ಸ್ವೀಕರಿಸಿರುತ್ತೇನೆ. ಅದರ ಪ್ರಕಾರ ಒಟ್ಟು ವಿಮಾ ಪಾಲಿಸಿ ಪ್ರೀಮಿಯಂ 2392 ಆಗಿರುತ್ತದೆ. ಇವೆಲ್ಲವನ್ನು ಆರೋಪಿತರ ಖರ್ಚಿಗೆ ತೆಗೆದುಕೊಂಡಿರುತ್ತೇನೆ.

ನಂತರ ಆರೋಪಿತರ ಮಕ್ಕಳ ವಿದ್ಯಾಭ್ಯಾಸದ ಖರ್ಚಿನ ಬಗ್ಗೆ ಶಾಲೆಯಿಂದ 117 ಮತ್ತು 118ರಂತೆ ನೀಡಿದ ಮಾಹಿತಿಯಲ್ಲಿ ಸದರಿಯವರ ಮಗ ಪ್ರಮುಖ್ ರವರಿಗೆ ಸಂಬಂಧಿಸಿದಂತೆ 78344 ಮತ್ತು ಪ್ರಣವ್ ರವರಿಗೆ 43190 ಆಗಿದ್ದು ಇದನ್ನು ಆರೋಪಿತರ ಖರ್ಚಿಗೆ ತೆಗೆದುಕೊಂಡಿರುತ್ತೇನೆ.

ಆರೋಪಿತರ ಮಗ ಪ್ರಮುಖ್ ರವರಿಗೆ ಸಂಬಂಧಿಸಿದಂತೆ ಬ್ರೈನ್ ಚೈಲ್ ಅಬಾಕಸ್ ಇವರಿಂದ ಮಾಹಿತಿ ಪಡೆದಿದ್ದು ಸದರಿಯವರು ದಿನಾಂಕ 25-11-13ರಂದು **ನಿಪಿ-16**5ರಂತೆ ಮಾಹಿತಿ ನೀಡಿರುತ್ತಾರೆ. ಸದರಿ ಮಾಹಿತಿಯಂತೆ ಒಟ್ಟು 6045 ರೂ ಪಾವತಿಸಿರುವುದು ಕಂಡುಬಂದಿರುತ್ತದೆ. ಇದನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ತೆಗೆದುಕೊಂಡಿರುತ್ತೇನೆ. ಇದಕ್ಕೆ ಸಂಬಂಧಿಸಿದ ಇತರ ದಾಖಲೆಗಳು 110 ಎಂದು ಗುರುತಿಸಲ್ಪಟ್ಟಿರುತ್ತದೆ.

ಆರೋಪಿತರು ಹಾಸನದಿಂದ ಅರಕಲಗೂಡಿಗೆ ಪ್ರಯಾಣ ಮಾಡಿದ ಮಾಹಿತಿಯನ್ನು ಕೆ ಎಸ್ ಆರ್ ಟಿ ಸಿ ಯಿಂದ ನಿಪಿ-49ರಂತೆ ಪಡೆದಿದ್ದು ಅದರಂತೆ ಒಟ್ಟು ಮಾಸಿಕ ಪಾಸ್ ದರ 740ನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. ಇದನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ತೆಗೆದುಕೊಂಡಿರುತ್ತೇನೆ.

ಆರೋಪಿತರು ದಾಸ್ ಡಯಾಗ್ನೊಸ್ಟಿಕ್ ಲ್ಯಾ ಬ್ ಹಾಸನ ಇಲ್ಲಿ ರಕ್ತಪರೀಕ್ಷೆ ಮಾಡಿಸಿಕೊಂಡ ಬಗ್ಗೆ ನಿಪಿ-50 ರಂತೆ ಮಾಹಿತಿ ಪಡೆದು ಅದರ ಪ್ರಕಾರ 1760ರೂ ಪಾವತಿಸಿರುತ್ತಾರೆನ್ನುವುದು ಕಂಡುಬಂದಿರುತ್ತದೆ. ಇದನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ತೆಗೆದುಕೊಂಡಿರುತ್ತೇನೆ.

ಆರೋಪಿತರು ಚಂದನ್ ಆಟೋ ಟ್ರೇಡರ್ಸ್‌ನಲ್ಲಿ ಬಿಡಿ ಭಾಗ ಖರೀದಿಸಿದಬಗ್ಗೆ ನಿಪಿ-51 ರಂತೆ ಮಾಹಿತಿ ಪಡೆದ್ದು ಅದರಂತೆ ಅವರು 650ರೂಪಾವತಿಸಿರುವುದು ಕಂಡುಬಂದಿರುತ್ತದೆ. ಇದನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ತೆಗೆದುಕೊಂಡಿರುತ್ತೇನೆ.

ಆರೋಪಿತರು ಬೆಂಗಳೂರಿನ ಅಪೊಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಮಾಹಿತಿಯನ್ನು ನಿಪಿ-52 ರಂತೆ ಸ್ವೀಕರಿಸಿದ್ದು ಅದರಪ್ರಕಾರ ಅವರು ಒಟ್ಟು 1583ರೂಗಳನ್ನು ಪಾವತಿಸಿರುತ್ತಾರೆಂದು ಕಂಡುಬಂದಿರುತ್ತದೆ. ಇದನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ತೆಗೆದುಕೊಂಡಿರುತ್ತೇನೆ.

ಆರೋಪಿತರು ಹಾಸನ ರಾಜಶ್ರೀ ಶೋರೂಂನಲ್ಲಿ 1560ರೂಪಾಯಿ ಮೌಲ್ಯದ ಸಾಮಗ್ರಿಗಳನು ಖರೀದಿಸಿದ್ದು ಈ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ಇದನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ತೆಗೆದುಕೊಂಡಿರುತ್ತೇನೆ.

ಆಶಾರವರು ಶುಭಾ ಗ್ಲಾಸ್ ಹೌಸ್ ನಲ್ಲಿ ಖರೀದಿಸಿದ ವಸ್ತುಗಳ ಬೆಲೆಯ ಮಾಹಿತಿಯನ್ನು ಸದರಿ ಅಂಗಡಿಯಿಂದ ನಿಪಿ-53 ರಂತೆ ಪಡೆದಿದ್ದು ಅದರ ಪ್ರಕಾರ 1042ರೂ ಪಾವತಿಸಿರುತ್ತಾರೆಂಬುದು ಕಂಡುಬಂದಿರುತ್ತದೆ. ಇದನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ತೆಗೆದುಕೊಂಡಿರುತ್ತೇನೆ.

ಆರೋಪಿತರು ಕೇಶವನೇತ್ರಾಲಯದಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಮಾಹಿತಿಯನ್ನುನಿಪಿ-112 ರಂತೆ ಸ್ವೀಕರಿಸಿದ್ದು ಅದರ ಪ್ರಕಾರ ಅವರು 120ರೂಗಳನ್ನು ಪಾವತಿಸಿದ್ದು ಇದನ್ನು ಆರೋಪಿತರ ಖರ್ಚಿನ

ಲೆಕ್ಕಕ್ಕೆ ತೆಗೆದುಕೊಂಡಿರುತ್ತೇನೆ.

ಆರೋಪಿತರ ಪತ್ನಿ ಶುಭಾರವರು ದಿವಾನ್ ಹೌಸಿಂಗ್ ಫೈನಾನ್ಸ್ ಕಾರ್ಪೊರೇಶನ್ ಲಿಮಿಟೆಡ್ ರವರಿಂದ ಪಡೆದ ಸಾಲ 11,72,027ನ್ನು ಮರುಪಾವತಿ ಮಾಡಿದ 2,71,174ರೂಗಳನು ಆರೋಪಿತರ ಖರ್ಚಿನ ಲೆಕ್ಕಕ್ಕೆ ತೆಗೆದುಕೊಂಡಿರುತ್ತೇನೆ. ಇದಕ್ಕೆ ಸಂಬಂಧಪಟ್ಟ ದಾಖಲೆ ನಿಪಿ-72 ಮತ್ತು 73 ಆಗಿರುತ್ತದೆ.

ಆರೋಪಿತರು ಅನುಸೂಚಿ 5 ರಲ್ಲಿ ಘೋಷಿಸಿಕೊಂಡಂತೆ ಕುವೆಂಪುನಗರ ಬಡಾವಣೆಯ ಎಲ್ ಐ ಜಿ 2 35/ಸಿ ಮನೆಕೊಳ್ಳಲು ಕರ್ನಾಟಕ ಗೃಹನಿರ್ಮಾಣ ಮಂಡಳಿ ಹಾಸನ ಇವರ ಲೋನ್ ಸಂಖ್ಯೆ 2350ಗೆ ಜಮಾ ಮಾಡಿದ 1,26,000ರೂಗಳನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ತೆಗೆದುಕೊಂಡಿರುತ್ತೇನೆ.

ಆರೋಪಿತರು ಆದಾಯ ತೆರಿಗೆ ಮಾಡಿದ ಬಗ್ಗೆ ಯಾವುದೇ ಮಾಹಿತಿ ಲಭ್ಯವಿರಲಿಲ್ಲ. ಈ ಮೇಲ್ಕಂಡ ಎಲ್ಲಾ ವಿವರವನ್ನು ಗಮನಿಸಿದಾಗ ಆರೋಪಿತರ ಒಟ್ಟು ಖರ್ಚು 17,14,810ರೂಪಾಯಿ ಎಂದು ಪರಿಗಣಿಸಲಾಗಿದೆ. ಆರೋಪಿತರು ನೀಡಿರುವ ಅನುಸೂಚಿ 1 ರಿಂದ 23 ರ ಎಲ್ಲಾ ಮಾಹಿತಿಯನ್ನು ತನಿಖೆಗೆ ಒಳಪಡಿಸಿರುತ್ತೇನೆ.

ಆರೋಪಿತರ ಚೆಕ್ ಅವಧಿಗಿಂತ ಪೂರ್ವದಲ್ಲಿ 1,04,100ರೂಪಾಯಿ ಆಸ್ತಿ ಇತ್ತು. ಚೆಕ್ ಅವಧಿಯ ಕೊನೆಗೆ 97,58,126ರೂಪಾಯಿ ಆಸ್ತಿ ಇರುತ್ತದೆ. ಚೆಕ್ ಅವಧಿಯಆಸ್ತಿ 96,54,026ರೂಪಾಯಿ ಆಗಿರುತ್ತದೆ. ಚೆಕ್ ಅವಧಿಯಲ್ಲಿ ಮಾಡಿರುವ ಖರ್ಚು 17,16,810ರೂಪಾಯಿ ಆಗಿರುತ್ತದೆ. ಆದಾಯ ಮತ್ತು ಖರ್ಚನ್ನು ಸೇರಿಸಿ ಆರೋಪಿತರ ಒಟ್ಟು ಆಸ್ತಿ 1,13,68,836ರೂಪಾಯಿ ಮೌಲ್ಯ ಇರುವುದು ಕಂಡುಬಂದಿರುತ್ತದೆ. ಚೆಕ್ ಅವಧಿಯಲ್ಲಿ ಆರೋಪಿತರು ಗಳಿಸಿದ ಆದಾಯ 59,59,977ರೂಪಾಯಿ ಆಗಿರುತ್ತದೆ. ಇವೆಲ್ಲವನ್ನು ಪರಿಗಣಿಸಿದಾಗ ಆರೋಪಿತರು ಅವರ ನಿಗಧಿತ ಆದಾಯುಕ್ಕಿಂತ ಹೆಚ್ಚುವರಿಯಾಗಿ 54,08,859ರೂಪಾಯಿಗಳನ್ನು ಅಂದರೆ ಶೇಕಡ 90.75 ಹೆಚ್ಚುವರಿ

ಸಂಪಾದನೆ ಮಾಡಿ ಹೆಚ್ಚುವರಿ ಆದಾಯವನ್ನು ವಿವಿಧ ಸ್ಥಿರಾಸ್ತಿ ಮತ್ತು ಚರಾಸ್ತಿಗಳಿಗೆ ತನ್ನ ಮತ್ತು ಕುಟುಂಬದ ಹೆಸರಿಗೆ ಖರೀದಿ ಮಾಡಿರುವುದು ದೃಢಪಟ್ಟಿರುತ್ತದೆ.

ದಿನಾಂಕ 30-6-14ರಂದು ಆರೋಪಿತರ ಸೇವಾ ವಿವರವನ್ನು ನಿಪಿ-64ರ ಪತ್ರದೊಂದಿಗೆ ನಿಪಿ-65ರಂತೆ ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ 6-2-15ರಂದು ಅಭಿಯೋಜನಾ ಮಂಜೂರಾತಿಯನ್ನು ಒದಗಿಸಿಕೊಡುವಂತೆ ಮೇಲಧಿಕಾರಿಗಳ ಮುಖಾಂತರ ಸಕ್ಷಮ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುತ್ತೇನೆ. ದಿನಾಂಕ 13-6-15 ರಂದು ಅಭಿಯೋಜನಾ ಮಂಜೂರಾತಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 4-7-15 ರಂದು ಆರೋಪಿತರ ವಿರುದ್ಧ ದೋ.ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸದರಿ ಅಭಿಯೋಜನಾ ಮಂಜೂರಾತಿಯನ್ನು ಈಗ ನೋಡುತ್ತಿದ್ದು **ನಿಪಿ-166** ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ಶ್ರೀ ಡಿ ಎಂ ಪಿ **ವಕೀಲರಿಂದಃ**

(ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಪಾಟೀಸವಾಲನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್

ನ್ಯಾಯಾಧೀಶರು, ಹಾಸನ.